(ಜಿಲ್ಲಾವಾರು ಹುದ್ದೆಗಳ ಮಾಹಿತಿ ಲಗತ್ತಿಸಿದೆ)

ಅ) ಖಾಲೀ ಇರುವ ಹುದ್ದೆಗಳನ್ನು ತುಂಬಲು ಈಗಾಗಲೇ ನೇಮಕಾತಿ ಸಮಿತಿಗಳನ್ನು ರಚಿಸಲಾಗಿದ್ದು, ಅರ್ಜಿಗಳನ್ನು ಸ್ವೀಕರಿಸಿ ಪರಿಶೀಲನೆಯೂ ನಡೆದಿದೆ. ಸಂದರ್ಶನಗಳನ್ನು ಕೂಡಲೇ ನಡೆಸಿ ಭರ್ತಿ ಮಾಡಲು ನಿರ್ದೇಶನ ನೀಡಲಾಗಿದೆ.

ಆ) ಪ್ರಶ್ನೆ 'ಅ' ಗೆ ಕೊಟ್ಟಿರುವ ಉತ್ತರವೇ ಈ ಪ್ರಶ್ನೆಗೂ ಅನ್ವಯಿಸುತ್ತದೆ.
ರಾಜ್ಯದಲ್ಲಿ ಖಾಲಿ ಇರುವ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರುಗಳ ಹುದ್ದೆಗಳು ಜಿಲ್ಲಾವಾರು ವಿವರಗಳು

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು.	ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಇರುವ ಹುದ್ದೆಗಳ ಸಂಖ್ಯೆ:	ಪ್ರೌಢ ಶಾಲಾ ಶಿಕ್ಷಕರ ಖಾಲಿ ಇರುವ ಹುದ್ದೆಗಳ ಸಂಖ್ಯೆ:
೧	ಬೆಂಗಳೂರು ಗ್ರಾ. ಜಿಲ್ಲೆ.	೩೧೦	೬೭
೨	ಬೆಂಗಳೂರು ದಕ್ಷಿಣ ಜಿಲ್ಲೆ	—	೫೪
೩	ಚಿತ್ರದುರ್ಗ	೨೨೮	೬೮
೪	ಕೋಲಾರ	೩೦೦	೮೯
೫	ಶಿವಮೊಗ್ಗ	೨೫೫	೪೮
೬	ತುಮಕೂರು	೩೪೨	೮೦
೭	ಮೈಸೂರು	೩೫೫	೩೧
೮	ಮಂಡ್ಯ	೩೨೬	೫೯
೯	ದಕ್ಷಿಣ ಕನ್ನಡ	೧೫೦	೪೨
೧೦	ಹಾಸನ	೨೨೦	೪೫
೧೧	ಚಿಕ್ಕಮಗಳೂರು	೨೦೦	೬೧
೧೨	ಕೊಡಗು	೮೬	೬೨
೧೩	ಬೆಳಗಾಂ	೩೭೪	೩೧
೧೪	ಬಿಜಾಪುರ	೩೧೬	೨೪
೧೫	ಧಾರವಾಡ	೪೧೦	೨೬
೧೬	ಉತ್ತರ ಕನ್ನಡ	೧೪೬	೨೭
೧೭	ಗುಲ್ಬರ್ಗ	೨೧೨	೩೫
೧೮	ರಾಯಚೂರು	೨೫೬	೩೭
೧೯	ಬಳ್ಳಾರಿ	೧೬೧	೩೪
೨೦	ಬೀದರ್	೧೬೦	೪೨
೨೧	ಬೆಂಗಳೂರು ಉತ್ತರ	—	೪೨
	ಒಟ್ಟು	೪೮೦೭	೧೦೪೪

ಪದವಿಪೂರ್ವಕಾಲೇಜಿನ ಖಾಲಿ ಹುದ್ದೆಗಳ ಬಗ್ಗೆ

೧೪೦೬ (೨೬೫೨) ಶ್ರೀ ಕೆ. ವಸಂತ ಬಂಗೇರಾ (ಬೆಳ್ತಂಗಡಿ).—ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಬೆಳ್ತಂಗಡಿ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕಳೆದ ಒಂದು ವರ್ಷದಿಂದ ಗುಮಾಸ್ತರ ಹುದ್ದೆ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ವಿಚಾರವನ್ನು ಸರ್ಕಾರದ ಗಮನಕ್ಕೆ ಆಗಾಗ್ಗೆ ತಂದಿದ್ದರೂ ಇನ್ನೂ ಗುಮಾಸ್ತರನ್ನು ನೇಮಿಸದಿರಲು ಕಾರಣವೇನು ?

ಇ) ೧೯೮೮-೮೯ನೇ ಸಾಲಿಗಾದರೂ ಡಪ್ಯುಟೇಷನ್ ಆಧಾರದ ಮೇಲೆ ಗುಮಾಸ್ತರನ್ನು ನೇಮಿಸಲಾಗುವುದೇ ?

ಈ) ಸದರಿ ಕಾಲೇಜಿನ ಉಳಿದ ಖಾಲಿ ಇರುವ ಹುದ್ದೆಗಳನ್ನು ಎಷ್ಟು ಸಮಯದೊಳಗೆ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು) —

ಅ) ಹುದ್ದೆ ಖಾಲಿ ಇರುವುದಿಲ್ಲ.

ಆ) ಮತ್ತು (ಇ) ಈ ಪ್ರಶ್ನೆಗಳು ಉದ್ಭವಿಸುವುದಿಲ್ಲ

ಈ) ಆರ್ಥಿಕ ಮಿತವ್ಯಯ ಸಡಲಿಸಿದ ನಂತರ ಖಾಲಿ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದು.

ಸರ್ಕಾರಿ ಪ್ರೌಢ ಶಾಲೆಗಳನ್ನು ತೆರೆಯುವ ಬಗ್ಗೆ

೧೪೦೭ (೨೬೫೧) ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಬೆಳ್ತಂಗಡಿ ತಾಲ್ಲೂಕಿನ ಕಳಿಯ ಕಾರ್ಯತ್ತಡ್ಕ ಕರ್ಕೆಜೆ ಅಂಡಿಂಜೆಗಳಲ್ಲಿ ಹೊಸ ಪ್ರೌಢ ಶಾಲೆಗಳನ್ನು ಪ್ರಾರಂಭಿಸಲು ಅನುಮತಿ ನೀಡುವಂತೆ ಈ ಹಿಂದೆ ಕೇಳಿಕೊಂಡಿದ್ದರೂ ಅನುಮತಿ ನೀಡದಿರಲು ಕಾರಣವೇನು ?

ಆ) ೧೯೮೮-೮೯ನೇ ಸಾಲಿನಲ್ಲಿ ಈ ಮೇಲಿನ ಸ್ಥಳಗಳಲ್ಲಿ ಹೊಸ ಸರ್ಕಾರಿ ಪ್ರೌಢ ಶಾಲೆಗಳನ್ನು ತೆರೆಯಲು ಅನುಮತಿ ನೀಡುವರೇ ?

ಇ) ಈ ಬಗ್ಗೆ ಸೂಕ್ತ ನಿರ್ದೇಶನವನ್ನು ಜಿಲ್ಲಾ ಪರಿಷತ್ತಿಗೆ ನೀಡಲಾಗುವುದೇ ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು).—

ಅ) ೧೯೮೫-೮೬ನೇ ಸಾಲಿನಿಂದ ರಾಜ್ಯದಲ್ಲಿ ಯಾವುದೇ ಸರ್ಕಾರಿ ಪ್ರೌಢ ಶಾಲೆಗಳನ್ನು ತೆರೆಯಲು ಅನುಮತಿ ನೀಡಿರುವುದಿಲ್ಲ.

ಆ) ಪ್ರಸ್ತಾವನೆಗಳನ್ನು ಆಯುಕ್ತರಿಂದ ತರಿಸಿ ಪರಿಶೀಲಿಸಿ ಅಗತ್ಯವೆಂಬ ಆಧಾರದ ಮೇಲೆ ಅನುಮತಿ ನೀಡಲು ಸರ್ಕಾರದ ಮಟ್ಟದಲ್ಲಿಯೇ ಕ್ರಮ ತೆಗೆದು ಕೊಳ್ಳಲು ನಿರ್ಧರಿಸಲಾಗಿದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಗಂಗಾಕಲ್ಯಾಣ ಯೋಜನೆ ಬಗ್ಗೆ

೧೪೦೮ (೨೫೯೨) ಶ್ರೀ ಶರಣಬಸಪ್ಪ ಮಾಲಿ ಪಾಟೀಲ್ (ಆಳಂದ್).—ಮಾನ್ಯ ಕಂದಾಯ ಯೋಜನೆ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಗಂಗಾಕಲ್ಯಾಣ ಯೋಜನೆ ಗ್ರಾಮಗಳಿಗೆ ಮಾತ್ರ ಅನ್ವಯಿಸುತ್ತಿರುವುದು ನಿಜವೇ ?

ಆ) ಹಾಗಿದ್ದಲ್ಲಿ, ಆಳಂದ್ ಪಟ್ಟಣದಲ್ಲಿನ ರೈತರುಗಳ ಜಮೀನಿಗೆ ಈ ಯೋಜನೆಯನ್ನು ಅನ್ವಯಿಸಲಾಗುವುದೇ ?

ಇ) ಈ ಯೋಜನೆಯನ್ನು ಭೀಮನಗರ ಭಾಗ, ಸಲಗರ ಭಾಗ, ಹೆಬ್ಬಾಳ ಭಾಗ, ತೆರೆಕಾಣ ಭಾಗ, ಹಾಗೂ ಸಂಗೋಳಗಿ ಭಾಗದ ಪ್ರದೇಶಗಳಲ್ಲಿಯೂ ತೆಗೆದುಕೊಳ್ಳಲು ಕ್ರಮ ಕೈಗೊಳ್ಳುವರೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ನೀರಾವರಿ ಮಂತ್ರಿಗಳು).—

ಅ) ಈ ಯೋಜನೆಗೆ ನಿಗಧಿಪಡಿಸಿರುವ ಸೂತ್ರಗಳಿಗನುಸಾರವಾಗಿರತಕ್ಕ ಜಮೀನುಗಳಿಗೆಲ್ಲಾ ಎಲ್ಲೇ ಇದ್ದರೂ ಅನ್ವಯಿಸುತ್ತದೆ.